ಬೂಕನಕೆರೆ ವಿಜೇಂದ್ರ, ಮೈಸೂರು
ಕುಡಿದು ತಡವಾಗಿ ಬರುವ ಗಂಡನನ್ನು ಹೆಂಡತಿ ಪ್ರಶ್ನಿಸುವುದಿಲ್ಲವಂತಲ್ಲ?



ಅವಶ್ಯವಿಲ್ಲವಂತೆ; ಕುಡಿದ ನಶೆಯಲ್ಲಿ ಅವನೇ ಎಲ್ಲವನ್ನೂ ಒಡಬಡಿಸಿಬಿಡುವನಂತೆ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಎಮ್ಮೆ ಹಿಂದ ಅಡ್ಡಾಡಿದ್ರ ಒಳ್ಳೇದೋ, ಎಮ್ಮಲ್ಲೆ ಹಿಂದ ಅಡ್ಡಾಡಿದ್ರ ಒಳ್ಳೇದೋ?
ಎಮ್ಮೆ ಹಿಂದ ಹೋದ್ರ ಹಾಲು, ಎಮ್ಮಲ್ಲೆ ಹಿಂದ ಹೋದ್ರ ಹಾಳು.

ಆರ್. ಮಧುಸೂದನ್, ಹಾಸನ
ಸೀತೆಯ 'ಕಾಲ್ಗುಣ'ದಿಂದಲೇ ನನಗೆ ವನವಾಸ ಪ್ರಾಪ್ತಿಯಾಯಿತೆಂಬ ದುರಾಲೋಚನೆ ರಾಮನಿಗೇಕೆ ಬರಲಿಲ್ಲ?
ಜೊತೆಗೇ ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರೂ ಇದ್ದುದರಿಂದ ಕನ್‌ಫ್ಯೂಸ್ ಆಯಿತಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಆತುರ ದಾನ: ಇದರ ನಿಜವಾದ ಅರ್ಥ?



ಕೊಟ್ಟಿದ್ದಕ್ಕೆ ಐದು ವರ್ಷ ಪಶ್ಚಾತ್ತಾಪ ಪಡುವ ಮತದಾನ.

ರತ್ನಜ, ಮೈಸೂರು
ಎಲ್ಲವನ್ನೂ ಹಣದಿಂದಲೇ ಅಳೆಯುವುದು ಸೂಕ್ತವೇ ಗುರು?
ಊಹೂಂ. ಹೆಣ್ಣನ್ನು ಗುಣದಿಂದ, ಗಂಡನ್ನು ಹೆಣ್ಣಿಂದ ಅಳೆಯಬೇಕು.

ಎಚ್.ಎಮ್.ಎ.ಪಿ. ಬೆಂಗಳೂರು
ಸಪ್ತ ಸಮುದ್ರಗಳಲ್ಲಿ ಕಳ್ಳಿನ ಸಮುದ್ರ ಎಲ್ಲಿದೆ? ಅಡ್ರೆಸ್ ಕೊಡ್ತೀರಾ?
ರಾಜರತ್ನಂ ಬರೆದಿರುವ 'ರತ್ನನ ಪದಗಳು' ಕೃತಿಯ 'ಇಸ್ಲ ಫಡ್ಡ' ಪದ್ಯದಲ್ಲಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹೆಂಡತಿ ಗಂಡನನ್ನು ದೇವರೆಂದು ಕರೆಯುವುದೇಕೆ?
ಅಷ್ಟು ಮಂಗಳಾರತಿ, ಅಷ್ಟೋತ್ತರಗಳನ್ನು ಮಾಡಿದರೂ ಕಮಕ್ ಕಿಮಕ್ಕೆನ್ನದೆ ಕುಳಿತಿರುತ್ತಾನಲ್ಲ.

ರಾಜಶೇಖರ ಹಾದಿಮನಿ, ಧಾರವಾಡ
ವರದಕ್ಷಿಣೆಯ ಕಿರಿಕಿರಿ ಅನುಭವಿಸಿದ್ದೀರಾ ರಾಮ್‌ಜಿ?
ಊಹೂಂ. ನನ್ನದು ಗುಣಶ್ರೀ ಮಂತಿಕೆಯ ಕುಚೇಲರ ವಲಯ.

ಬಿ. ಚಂದ್ರೇಗೌಡ, ಬೆಂಗಳೂರು
ಲಕ್ಷ್ಮಣನ ಲಕ್ಷ್ಮಣರೇಖೆಗೂ ಸತಿಯ ಲಕ್ಷ್ಮಣರೇಖೆಗೂ ವ್ಯತ್ಯಾಸ?
ಅವನದು ಒಂದೇ ಗೆರೆ. ಇವಳದು ರೂಲ್ಡ್ ನೋಟ್ ಬುಕ್.

ಅಮರಯ್ಯಾ ಪತ್ರಿಮಠ, ಸುರಪುರ
ಕೆಲವರಿಗೆ ಮನೆಯು ಮೃಗಾಲಯ ಆಗಿರುತ್ತದಂತೆ?
ಹದ್ದು, ಕಾಗೆ, ಗಿಡುಗ, ಗೂಬೆಗಳಿರುವ ಪಕ್ಷಿಧಾಮವೂ ಆಗಿರುತ್ತದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಅಪರಾಧವೆಂಬ ನದಿಯಲ್ಲಿ ಮೀನಿನ ಗಾಳ ಹಾಕಿದರೆ ಗಾಳಕ್ಕೆ ಬಿದ್ದವರು ಯಾರು?
ಗಾಳವನ್ನೇ ನುಂಗಬಲ್ಲ **mean mentality**ಯ ತಿಮಿಂಗಿಲಗಳು.

ಬಾ.ರಂ. ಸುರೇಶ್, ಶಿವಮೊಗ್ಗ
ದೇವಸ್ಥಾನ, ಪುಣ್ಯಕ್ಷೇತ್ರಗಳಿಗೆ ಹೋಗಿ ಪೂಜೆ ಮಾಡಿದರೆ ಮದುವೆ, ಮಕ್ಕಳು ಆಗುತ್ತವಂತೆ. ಹೌದಾ ಶಿವ?
ಓಹ್! ಅಷ್ಟೊಂದು ವೃದ್ಧವೃದ್ಧೆಯರಿಗೆ ಮರುಮದುವೆ, ಮತ್ತಷ್ಟು ಮಕ್ಕಳ ಯೋಚನೆಯೆ? ಅಕಟಕಟಾ!

ಕೆ.ವಿ. ಗೋವಿಂದಾಚಾರಿ, ಮೈಸೂರು
ಹಿಂದೆ ಆಸೆ; ಈಗ ದುರಾಸೆ; ಮುಂದೆ?
ಪಕ್ವತೆ, ವಿವೇಚನೆ.

## ಬಹುಮಾನಿತ ಪ್ರಶ್ನೆ

ರತ್ನ ಕೊರವರ, ಧಾರವಾಡ
ಜಿಪಿಎಸ್ ಸಹಾಯವಿಲ್ಲದೆ ವಲಸೆ ಬರುವ ಪಕ್ಷಿಗಳಿಗೆ ದಾರಿ ತೋರಿಸುವವರು ಯಾರು?
ಹಸಿದ ಹೊಟ್ಟೆ ಮತ್ತು ಜೀವಭಯ; ವಿಶ್ವದಲ್ಲಿ ಇವೆರಡಕ್ಕಿಂತ ಉತ್ತಮ ಜಿಪಿಎಸ್ ಇಲ್ಲ.

ಮಲ್ಲಿಕಾರ್ಜುನ, ಸುರಧೇನುಪುರ
ಪಾತ್ರ ಮುಖ್ಯವೋ, ಪಾತ್ರಧಾರಿ ಮುಖ್ಯವೋ?
ಪಾತ್ರವೇ; ಪಾತ್ರ ಆತ್ಮವಿದ್ದಂತೆ; ಪಾತ್ರಧಾರಿ ಜನ್ಮ.

ರವಿಕಾಂತ ಎಂ.ಕೆ. ತುಮಕೂರು
ದೇಗುಲ ಕಟ್ಟಿಸಲು ಮುಂದಾಗುವ ದಾನಿಗಳು ಕುಸಿಯುತ್ತಿರುವ ಸರ್ಕಾರಿ ಶಾಲೆಗಳತ್ತ ತಿರುಗಿನೋಡದರೇಕೆ?
ನಾಗತಿಹಳ್ಳಿಗೆ ಹೋಗಿಲ್ಲವಾದ್ದರಿಂದ. ಅಲ್ಲಿ ಅಂತಹ ಮಾದರಿ ದಾನಿಗಳಿದ್ದಾರೆ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
ಪ್ರಾಣಿಗಳ ಬುದ್ಧಿಗೂ ಮನುಷ್ಯನ ಬುದ್ಧಿಗೂ ವ್ಯತ್ಯಾಸವೇನು?



ಅವುಗಳದು ಹೊಟ್ಟೆ ಹೊರೆಯುವ ಬದುಕು; ಇವುಗಳದು ಹೊಟ್ಟೆ ಉರಿಯುವ ಬದುಕು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಪ್ರಾಮಾಣಿಕರಿಗೇಕೆ ಕಷ್ಟನಷ್ಟ?
ಭ್ರಷ್ಟತೆಯ ಲಿಫ್ಟ್ ಬಳಸದೆ ಪರಿಶ್ರಮದ ಮೆಟ್ಟಿಲುಗಳನ್ನು ಏರುವುದರಿಂದ.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕೀಯ ಸನ್ಯಾಸ ಸ್ವೀಕರಿಸುವವರಿಗೆ ದೀಕ್ಷೆ ಕೊಡುವವರು ಯಾರು?
'ಸ್ಪರ್ಧಿಸಲು ಟಿಕೆಟ್ ಇಲ್ಲ' ಎಂದು ಕೈಯಾಡಿಸುವ ಹೈಕಮಾಂಡ್.

■ ರಾಮ್